**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ**

**ಸಿ.ಸಿ.ನಂ. 40/2025**

**ಫಿರ್ಯಾದುದಾರರು : ಕೆ ಆರ್ ಸಾಗರ ಪೊಲೀಸರು**

**ವಿರುದ್ಧ**

**ಆರೋಪಿಗಳು ಃ 1. ರಾಮಕೃಷ್ಣ ಜಿ ಬಿನ್ ಲೇಟ್ ಗೌಡೇಗೌಡ, 65 ವರ್ಷ, ಕೆಎ 03/ಇಎಲ್-2241 ಹಿರೋ ಹೊಂಡಾ ಸಿಡಿ ಡಾನ್ ನ ಚಾಲಕ, ವಾಸಃ ಸೀತಾಪುರ ಗ್ರಾಮ, ಚಿನಕುರಳಿ ಹೋಬಳಿ, ಪಾಂಡವಪುರ ತಾಲ್ಲೂಕು.**

**ಆಪಾದನಾ ಸಾರಾಂಶ**

**ಶ್ರೀ ಆರ್ .ಮಹೇಶ, ಬಿ.ಎ.ಎಲ್. ಎಲ್.ಎಲ್.ಬಿ, ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಪಾಂಡವಪುರ ಆದ ನಾನು ಆರೋಪಿಯಾದ ನೀವು**

*ದಿನಾಂಕ 24.11.2024 ರಂದು ಬೆಳಿಗ್ಗೆ 9.40 ಗಂಟೆ ಸಮಯದಲ್ಲಿ ಕೆ ಆರ್ ಸಾಗರ ಪೊಲೀಸ್ ಠಾಣಾ ಸರಹದ್ದಿನ ಪಾಂಡವಪುರ ತಾಲ್ಲೂಕು, ಕೆಟ್ಟೇರಿ ಗ್ರಾಮದ ವೃತ್ತದ ಬಳಿ ಸಾಕ್ಷಿ.1 ರವರು ಕೆಎ-09/ಎಂಸಿ-7444 ಹ್ಯುಂಡಾಯ್ ಐ-20 ಕಾರನ್ನು ಹೊಸ ಕನ್ನಂಬಾಡಿ ಕಡೆಯಿಂದ ಕೆ ಆರ್ ಎಸ್ ಕಡೆಗೆ ತಿರುಗಿಸುತ್ತಿರುವಾಗ, 1 ನೇ ಆರೋಪಿಯಾದ ನೀವು ಕೆಎ-03/ ಇಎಲ್-2241 ರ ಹೀರೋ ಹೊಂಡಾ ಸಿಡಿ ಡಾನ್ ಬೈಕನ್ನು ಕೆ ಆರ್ ಎಸ್ ರಸ್ತೆ ಕಡೆಯಿಂದ ಪಾಂಡವಪುರದ ಕಡೆಗಾದಂತೆ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಜಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸಾಕ್ಷಿ.1 ರವರ ಕಾರಿನ ಹಿಂಭಾಗದ ಬಲಭಾಗದ ಡೋರ್ ಗೆ ಡಿಕ್ಕಿ ಅಪಘಾತವನ್ನುಂಟು ಮಾಡಿ ಭಾರತೀಯ ನ್ಯಾಯ ಸಂಹಿತೆ ಕಲಂ 281 ರಡಿಯಲ್ಲಿನ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವಿರಿ.*

*ಅದೇ ದಿನ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡದೇ ಹಾಗೂ ಗಾಯಾಳುವನ್ನು ಚಿಕಿತ್ಸೆ ವ್ಯವಸ್ಥೆ ಮಾಡದೇ ಹೊರಟು ಹೋಗಿ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.*

*ಅದೇ ದಿನ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಅಪಘಾತದ ಸಮಯದಲ್ಲಿ 1 ನೇ ಆರೋಪಿಯಾದ ನೀವು ವಾಹನ ಚಾಲನಾ ಪರವಾನಗಿ ಹೊಂದದೆ ಹಾಗೂ ವಿಮೆ ಇಲ್ಲದ ಮೋಟಾರು ಬೈಕನ್ನು ಚಾಲನೆ ಮಾಡಿ ಮೋಟಾರು ವಾಹನ ಕಾಯ್ದೆ ಕಲಂ 181(3) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.*

***ಪ್ರ 1 ಮೇಲೆ ಹೇಳಿದ ಆಪಾದನೆಯ ಸಾರಾಂಶ ನಿಮಗೆ ಅರ್ಥವಾಯಿತೆ?***

***ಉಃ 1.***

***ಪ್ರ 2 ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಪ್ರತಿರಕ್ಷೆ ಇದೆಯೆ ?***

***ಉಃ 1.***

***(ಆಪಾದನೆಯ ಸಾರಾಂಶವನ್ನು 1 ನೇ ಆರೋಪಿಗೆ ಓದಿ ಹೇಳಿ, ಅವರು ಸರಿಯೆಂದು ಒಪ್ಪಿದ ಮೇರೆಗೆ ಅವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ.)***

***ದಿನಾಂಕಃ 10.07.2025***

***ಸ್ಥಳ ಃ ಪಾಂಡವಪುರ***

***( ಆರ್ . ಮಹೇಶ)***

***ಹಿರಿಯ ಸಿವಿಲ್ ನ್ಯಾಯಾಧೀಶರು***

***ಮತ್ತು ಜೆ.ಎಂ.ಎಫ್.ಸಿ. ಪಾಂಡವಪುರ.***